ಅಧ್ಯಯನ ಮಾಡಿ, ಅವುಗಳಲ್ಲಿ ಹಣ ಹೂಡಿಕೆ ಮಾಡಬೇಕೇ ಬೇಡವೇ ಎಂಬುದನ್ನು ವೃತ್ತಿಪರವಾಗಿ ತೀರ್ಮಾನಿಸುತ್ತಾರೆ. ಮ್ಯೂಚುವಲ್ ಫಂಡ್ ಮೂಲಕ ಹೂಡಿಕೆ ಮಾಡಿದವನಿಗೆ, ಫಂಡ್ ನಿರ್ವಾಹಕನ ವೃತ್ತಿಪರತೆಯ ಪ್ರಯೋಜನ ನೇರವಾಗಿ ದಕ್ಕುತ್ತದೆ.

ಬ್ಲೂಚಿಪ್ ಕಂಪನಿಗಳಲ್ಲಿ ಹಣ ತೊಡಗಿಸುವ ಒಂದು ಫಂಡ್ ಕಳೆದ ಐದು ವರ್ಷಗಳ ಅವಧಿಯಲ್ಲಿ ಒಟ್ಟು ಶೇ. 111ರಷ್ಟು ಲಾಭ ತಂದುಕೊಟ್ಟಿದೆ.



ಇದೇ ಅವಧಿಯಲ್ಲಿ ಸಣ್ಣ ಕಂಪನಿಗಳಲ್ಲಿ ಹೂಡಿಕೆ ಮಾಡುವ ಒಂದು ಫಂಡ್ ಶೇ. 161ರಷ್ಟು ಲಾಭ ತಂದುಕೊಟ್ಟಿದೆ. ಮೊದಲೇ ಹೇಳಿದಂತೆ, ಬ್ಲೂಚಿಪ್ ಕಂಪನಿಗಳ ಷೇರುಗಳಲ್ಲಿಯೂ, ಸಣ್ಣ ಕಂಪನಿಗಳ ಷೇರುಗಳಲ್ಲಿಯೂ ಅವುಗಳದೇ ಆದ ಪ್ರಯೋಜನಗಳು, ಅಪಾಯಗಳು ಇದ್ದೇ ಇರುತ್ತವೆ. ಬ್ಲೂಚಿಪ್ ಕಂಪನಿಗಳು, ಸಣ್ಣ ಕಂಪನಿಗಳಲ್ಲಿ ಹೂಡಿಕೆ ಮಾಡಲು ಪ್ರತ್ಯೇಕ ಮ್ಯೂಚುವಲ್ ಫಂಡ್‌ಗಳು ಇರುವಂತೆಯೇ ಮಧ್ಯಮ, ದೊಡ್ಡ – ಹೀಗೆ ಬೇರೆ ಬೇರೆ ವರ್ಗಗಳಿಗೆ ಸೇರುವ ಕಂಪನಿಗಳಲ್ಲಿ ಹಣ ಹೂಡಿಕೆ ಮಾಡಲಿಕ್ಕೆಂದೇ ರೂಪುಗೊಂಡಿರುವ ಮ್ಯೂಚುವಲ್ ಫಂಡ್‌ಗಳು ಇವೆ.

ಪ್ರತಿನಿತ್ಯ ಬೇರೆ ಬೇರೆ ವೃತ್ತಿಗಳಲ್ಲಿ ತೊಡಗಿಸಿಕೊಂಡಿರುವ, ಹೂಡಿಕೆಯಲ್ಲಿ ಆಸಕ್ತಿ ಇರುವ ವ್ಯಕ್ತಿಗೆ ನೂರೆಂಟು ಕಂಪನಿಗಳ ಬಗ್ಗೆ ಅಧ್ಯಯನ ಮಾಡುತ್ತ ಕುಳಿತಿರುವುದು ಆಗದ ಕೆಲಸ ಎಂದಾದರೆ, ಆ ಕೆಲಸವನ್ನು ಮ್ಯೂಚುವಲ್ ಫಂಡ್ ನಿರ್ವಾಹಕ ಮಾಡಿಕೊಡುತ್ತಾನೆ. ಅದಕ್ಕಾಗಿ ಒಂದಿಷ್ಟು ಶುಲ್ಕವನ್ನು ಪಡೆಯುತ್ತಾನೆ. ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವ ಆಸಕ್ತಿ ಇರುವ ನೂರಾರು ಮಂದಿಯಿಂದ, ಅವರ ಸಾಮರ್ಥ್ಯಕ್ಕೆ ಅನುಗುಣವಾಗಿ ಹಣವನ್ನು ಸಂಗ್ರಹಿಸಿ, ಆ ಹಣವನ್ನು ಫಂಡ್‌ನ ಉದ್ದೇಶಕ್ಕೆ ಅನುಗುಣವಾಗಿ ಹೂಡಿಕೆ ಮಾಡುತ್ತಾನೆ. ಹೂಡಿಕೆ ಮಾಡಲು ಒಂದಿಷ್ಟು ಹಣ ಇದೆ. ಆದರೆ, ಈ ಹಣವನ್ನು ಯಾವ ಕಂಪನಿಯಲ್ಲಿ ಎಷ್ಟು ಪ್ರಮಾಣದಲ್ಲಿ ತೊಡಗಿಸಬೇಕು ಎಂಬುದು ಗೊತ್ತಾಗುತ್ತಿಲ್ಲ ಎನ್ನುವವರಿಗೆ ಕೂಡ ಮ್ಯೂಚುವಲ್ ಫಂಡ್‌ಗಳು ಒಂದು ಉತ್ತರ. ಫಂಡ್‌ನ ನಿರ್ವಾಹಕ, ಹೂಡಿಕೆದಾರರಿಂದ ಸಂಗ್ರಹಿಸಿದ ಮೊತ್ತವನ್ನು ವೃತ್ತಿಪರವಾಗಿ ಬೇರೆ ಬೇರೆ ಕಂಪನಿಗಳಲ್ಲಿ ನಿರ್ದಿಷ್ಟ ಪ್ರಮಾಣದಲ್ಲಿ ಹಂಚಿಕೆ ಮಾಡುತ್ತಾನೆ. ಆತನ ಉದ್ದೇಶ ಹೂಡಿಕೆದಾರರಿಗೆ ನಷ್ಟವಾಗುವ ಸಾಧ್ಯತೆಯನ್ನು ಆದಷ್ಟುಮಟ್ಟಿಗೆ ತಗ್ಗಿಸಬೇಕು, ಲಾಭ ಸಿಗುವ ಸಾಧ್ಯತೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ಹೆಚ್ಚಿಸಬೇಕು ಎಂಬುದೇ ಆಗಿರುತ್ತದೆ.

ಸ್ಮಾರ್ಟ್‌ಫೋನ್ ಮತ್ತು ಇಂಟರ್ನೆಟ್ ಸಂಪರ್ಕ ಹೊಂದಿರುವ ವ್ಯಕ್ತಿಗೆ ಡಿ–ಮ್ಯಾಟ್ ಖಾತೆ ತೆರೆಯುವುದು ಈಗ ಬಹಳ ಸುಲಭ. ಮನೆಯಲ್ಲೇ ಕುಳಿತು ಖಾತೆ ತೆರೆಯುವ ಸೌಲಭ್ಯವನ್ನು ಹಲವು ಬ್ರೋಕರೇಜ್ ಕಂಪನಿಗಳು ಒದಗಿಸುತ್ತಿವೆ. ಆದರೆ, ಷೇರುಗಳಲ್ಲಿ ನೇರವಾಗಿ ಹೂಡಿಕೆ ಮಾಡುವುದು ಖಾತೆ ತೆರೆದಷ್ಟು ಸುಲಭದ ಕೆಲಸ ಅಲ್ಲ. ಡಿಸ್ಕೌಂಟ್ ಬ್ರೋಕರೇಜ್ ಕಂಪನಿಯೊಂದರ ಆ್ಯಪ್ ಮೂಲಕ ಡಿ–ಮ್ಯಾಟ್ ಖಾತೆ ಆರಂಭಿಸಿದ್ದ ವಿಶ್ವಾಸ್ (ಹೆಸರು ಬದಲಾಯಿಸಲಾಗಿದೆ) ಹೂಡಿಕೆ ಪಯಣದ ಆರಂಭದ ದಿನಗಳಲ್ಲಿ, ಕಂಪನಿಯೊಂದರ ₹ 10 ಮೌಲ್ಯದ ಷೇರುಗಳನ್ನು ಖರೀದಿಸಿದ್ದರು. ಕೆಲವೇ ದಿನಗಳಲ್ಲಿ ಈ ಷೇರಿನ ಮೌಲ್ಯವು ಶೇ. 20ರಷ್ಟು ಏರಿಕೆ ದಾಖಲಿಸಿತು. ಆ ಸಂದರ್ಭದಲ್ಲಿ ವಿಶ್ವಾಸ್ ಆ ಷೇರುಗಳನ್ನು ಮಾರಾಟ ಮಾಡಬೇಕಿತ್ತು. ಷೇರು ಮಾರುಕಟ್ಟೆಯ ಹೂಡಿಕೆಯಲ್ಲಿ, ಯಾವಾಗ ಎಲ್ಲಿ ಹೂಡಿಕೆ ಮಾಡಬೇಕು ಎಂಬುದನ್ನು ತಿಳಿದಿರಬೇಕಿರುವುದು ಎಷ್ಟು ಮುಖ್ಯವೋ, ಯಾವ ಹೂಡಿಕೆಯಿಂದು ಎಷ್ಟು ಹೊತ್ತಿಗೆ ಹೊರಬರಬೇಕು ಎಂಬುದನ್ನು ತಿಳಿದಿರಬೇಕಿರುವುದೂ ಅಷ್ಟೇ ಮುಖ್ಯ. ಆದರೆ, ಶೇ. 20ರಷ್ಟು ಲಾಭ ಕಂಡ ವಿಶ್ವಾಸ್ ಅವರಿಗೆ ಆ ಷೇರು ಮಾರಾಟ ಮಾಡಲು ಮನಸ್ಸಾಗಲಿಲ್ಲ. ಇನ್ನೊಂದಿಷ್ಟು ಲಾಭ ಬರಬಹುದು ಎಂಬ ಆಸೆಯಿಂದ ಕುಳಿತರು. ನಂತರದ ಕೆಲವು ದಿನಗಳಲ್ಲಿ ಅದೇ ಷೇರಿನ ಮೌಲ್ಯವು ಕುಸಿತದ ಹಾದಿ ಹಿಡಿಯಿತು. ನಂತರ ಒಂದು ದಿನ ಅವರು ಲಾಭವೂ ಇಲ್ಲದ, ನಷ್ಟವೂ ಇಲ್ಲದ ಮಟ್ಟದಲ್ಲಿ ಅದೇ ಷೇರುಗಳನ್ನು ಮಾರಾಟ ಮಾಡಿದರು.

ಮಾರುಕಟ್ಟೆಯ ಏರಿಳಿತಗಳ ಬಗ್ಗೆ ಹೆಚ್ಚೇನೂ ಗೊತ್ತಿರದಿದ್ದ ವಿಶ್ವಾಸ್ ಅವರು ತಮ್ಮ ಹೂಡಿಕೆಯನ್ನು ಮ್ಯೂಚುವಲ್ ಫಂಡ್ ಕಂಪನಿಗಳ ಮೂಲಕ ಮಾಡಿದ್ದಿದ್ದರೆ, ಯಾವ ಹೂಡಿಕೆಯಿಂದ ಯಾವ ಸಂದರ್ಭದಲ್ಲಿ ನಿರ್ಗಮಿಸಬೇಕು ಎಂಬುದನ್ನು ಮ್ಯೂಚುವಲ್ ಫಂಡ್ ನಿರ್ವಾಹಕ ತೀರ್ಮಾನಿಸುತ್ತಿದ್ದ. ಹೂಡಿಕೆಯನ್ನೇ ವೃತ್ತಿಯಾಗಿಸಿಕೊಂಡಿರುವ ಫಂಡ್ ನಿರ್ವಾಹಕರು, ಹೂಡಿಕೆಯ ಹಣವನ್ನು ಸಾಮಾನ್ಯ ಸಣ್ಣ ಹೂಡಿಕೆದಾರರಿಗಿಂತ ಚೆನ್ನಾಗಿ ನಿಭಾಯಿಸುವ ಸಾಧ್ಯತೆಗಳು ಹೆಚ್ಚು. ಅವರ ವೃತ್ತಿ ಕೌಶಲವು ಹೂಡಿಕೆದಾರರ ಹಣವನ್ನು ಕಾಪಾಡುತ್ತದೆ. ಅಲ್ಲದೆ, ಮಾರುಕಟ್ಟೆಯ ಇತಿಮಿತಿಯಲ್ಲಿ ಹೆಚ್ಚು ಲಾಭ ಹೂಡಿಕೆದಾರರಿಗೆ ಸಿಗುವಂತೆ ನೋಡಿಕೊಳ್ಳುತ್ತದೆ. ಷೇರು ಮಾರುಕಟ್ಟೆಗೆ ಹೊಸದಾಗಿ, ನೇರವಾಗಿ ಪ್ರವೇಶ ಮಾಡುವವರಿಗೆ 'ಯಾವ ಮ್ಯೂಚುವಲ್ ಫಂಡ್‌ಗಳು ಯಾವ ಕಂಪನಿಯಲ್ಲಿ ಹೆಚ್ಚು ಹೂಡಿಕೆ ಮಾಡಿವೆ ಎಂಬುದನ್ನು ಗಮನಿಸಿ. ಅವರು ಹೆಚ್ಚೆಚ್ಚು ಹೂಡಿಕೆ ಮಾಡಿರುವ ಷೇರುಗಳು ಮೌಲ್ಯ ಹೆಚ್ಚಿಸಿಕೊಳ್ಳುವ ಸಾಧ್ಯತೆ ತುಸು ಜಾಸ್ತಿಯೇ ಇರಬಹುದು' ಎಂಬ ಕಿವಿಮಾತನ್ನು ಹೇಳುವುದಿದೆ.

ನೇರವಾಗಿ ಷೇರುಗಳಲ್ಲಿ ಹೂಡಿಕೆ ಹಾಗೂ ಮ್ಯೂಚುವಲ್ ಫಂಡ್‌ಗಳ ಮೂಲಕ ಷೇರುಗಳಲ್ಲಿ ಹೂಡಿಕೆ ನಡುವೆ, ಕೆಲವರಿಗೆ ಬಹುಮುಖ್ಯ ಅನ್ನಿಸುವ ವ್ಯತ್ಯಾಸವೊಂದು ಇದೆ. ಒಂದಿಷ್ಟು ಜನರ ಬಳಿ ಹೂಡಿಕೆ ಮಾಡಲು ದೊಡ್ಡ ಮೊತ್ತ ಇರಬಹುದು. ಆದರೆ ಹಲವರ ಬಳಿ ಅಂತಹ ಮೊತ್ತ ಇಲ್ಲದಿರಬಹುದು. ₹ 100ರಷ್ಟು ಕನಿಷ್ಠ ಮೊತ್ತ ಇಟ್ಟುಕೊಂಡೂ ಹಲವು ಕಂಪನಿಗಳ ಷೇರುಗಳಲ್ಲಿ ಹಣ ತೊಡಗಿಸುವ ಅವಕಾಶವನ್ನು ಕೆಲವು ಫಂಡ್‌ಗಳು ಈಗ ಒದಗಿಸುತ್ತಿವೆ. ತೀರಾ ಸಣ್ಣ ಆದಾಯ ಇರುವ, ಹೂಡಿಕೆಯ ಆಸಕ್ತಿ ಇರುವವರಿಗೆ ಇದು ಬಹಳ ಉಪಯುಕ್ತ ಆಗಬಲ್ಲದು.

ಪ್ರತಿಕ್ರಿಯಿಸಿ: feedback@sudha.co.in